


International Journal of Kannada Research
www.kannadajournal.com

ISSN: 2454–5813
IJSR 2017; 3(4): 183-188
© 2017 IJKS
www.kannadajournal.com
Received: 16-08-2017
Accepted: 23-09-2017

**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

**Correspondence**
**ಡಾ. ಕೆ ಶಿವಾನಂದಯ್ಯ**
ಸಹಪ್ರಾಧ್ಯಾಪಕರು,
ಸ್ನಾತಕೋತ್ತರ ಕನ್ನಡ ವಿಭಾಗ,
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ,
ಕರ್ನಾಟಕ, ಭಾರತ

# ಡಿ.ಆರ್.ನಾಗರಾಜರ ವಸಾಹತೋತ್ತರ ಸಂಸ್ಕೃತಿ ಚಿಂತನೆಯ ವಿಭಿನ್ನ ವಿನ್ಯಾಸಗಳು

**ಡಾ. ಕೆ ಶಿವಾನಂದಯ್ಯ**

**ಪೀಠಿಕೆ**

ಡಿ.ಆರ್.ನಾಗರಾಜರ ‘ಸಂಸ್ಕೃತಿ ಕಥನ’ ಅವರ ಮರಣೋತ್ತರ ವಿಮರ್ಶಾ ಕೃತಿ. 600 ಪುಟಗಳ ಈ ಕೃತಿಯಲ್ಲಿ ತಮ್ಮ ವಿಮರ್ಶೆಯ ಶಕ್ತಿ ಮತ್ತು ಮಿತಿಗಳನ್ನು ಕುರಿತು ಹೀಗೆ ವಿಶ್ಲೇಷಿಸಿಕೊಂಡಿದ್ದಾರೆ: “ಜ್ಞಾನ ತನ್ನ ಶೃಂಗ ಸ್ಥಿತಿಯಲ್ಲಿ ಸ್ವಯಂ ವಿಸರ್ಜನೆಗೊಂಡಾಗ ಮಗುವಿನ ಮುಗ್ಧತೆ ಹುಟ್ಟುತ್ತದೆ. ನಾನಿನ್ನೂ ವಿದ್ಯೆಯ ಮಟ್ಟದಲ್ಲೇ ಇರುವಾತ. ಅದು ಸಾಂದ್ರವಾಗಿ ಸ್ವಯಂ ವಿಸರ್ಜನೆಗೊಂಡು ಮಗುತನದ ಮುಗ್ಧತೆ ಹುಟ್ಟಲಿ ಎಂಬ ಆಸೆ ನನ್ನದು”. ಜ್ಞಾನ (ವ್ಯುತ್ಪತ್ತಿ)ದ ಬಗ್ಗೆ ಡಿ.ಆರ್.ನಾಗರಾಜ ಅವರಿಗೆ ಇರುವ ಈ ಮೋಹಾವೇಶವೇ ಅವರಲ್ಲಿ ವಿದ್ವತ್ತಿನ, ಪಾಂಡಿತ್ಯದ ವ್ಯಸನವನ್ನು ಹುಟ್ಟುಹಾಕಿದೆ. ಅಡಿಗ, ಅನಂತಮೂರ್ತಿ, ಲಂಕೇಶ, ಕಂಬಾರ, ತೇಜಸ್ವಿ ಮುಂತಾದ ನವ್ಯರನ್ನು ವಿಮರ್ಶಿಸುತ್ತಾ, ‘ಒಂದ ಪ್ರಕಾಂಡ ವಿದ್ವತ್ತಿನ ಕನ್ನಡ ಸಂಸ್ಕೃತಿಯನ್ನು ಅಖಂಡವಾಗಿ ಪುನರ್ ನಿರ್ಮಾಣ ಮಾಡಬಲ್ಲ ಒಬ್ಬ ಚಿಂತಕನೂ ನಮ್ಮಲ್ಲಿ ಮೂಡಿಬರಲಿಲ್ಲ’. ಎಂದ ಡಿ.ಆರ್.ನಾಗರಾಜ ಅಭಿಪ್ರಾಯಪಟ್ಟಿದ್ದಾರೆ.

ಡಿ.ಆರ್.ನಾಗರಾಜ ಅವರ ‘ಸಂಸ್ಕೃತಿ ಕಥನ’ 600 ಪುಟಗಳಿರುವ ಆರು ಭಾಗಗಳಲ್ಲಿ ಎರಡು ಸಂದರ್ಶನಗಳು ಸೇರಿದಂತೆ 85 ಲೇಖನಗಳ ಬೃಹತ್ ಸಂಪುಟ. ಸಾಹಿತ್ಯ ಕೃತಿಗಳ ವಿಶ್ಲೇಷಣೆ, ಒಳನೋಟಗಳ ಗ್ರಹಿಕೆ ಮತ್ತು ಮೌಲ್ಯಮಾಪನಕ್ಕಿಂತಲೂ ಡಿ.ಆರ್.ನಾಗರಾಜ ಸಂಸ್ಕೃತಿ ಚಿಂತನೆಯಲ್ಲಿ ಹೆಚ್ಚು ಖಚಿತವಾಗಿದ್ದಾರೆ. ಇದರಲ್ಲಿ ಗೊಂದಲಗಳಾಗಲಿ ಅಥವಾ ಆತುರದ ನಡೆಯಾಗಲಿ ಕಂಡುಬರುವುದಿಲ್ಲ. ಸಮಕಾಲೀನ ಕರ್ನಾಟಕ, ಮೆಕಾಲೆ ಮಕ್ಕಳು, ಜೂನ್ ತಿಂಗಳ ಶಿಕ್ಷಣ ಸಂತೆ, ಚಲಿಸುವ ಧರ್ಮ ಮೆರತು ನಿಂತ ಕಟ್ಟಡಕ್ಕಾಗಿ ಸಾಯುವವರು, ಆತಂಕಿತ ಹಿಂದೂ ಮತ್ತು ಕುಪಿತ ರೈತ, ಮಣ್ಣಿನ ಪವಿತ್ರೀಕರಣ, ಕನ್ನಡ ಸಾಹಿತ್ಯ ಮುಖ್ಯ ವಾಗ್ವಾದಗಳು: ನವ್ಯ ಚಳವಳಿಗೆ ಸಂಬಂಧಿಸಿ. ಛದ್ಮವೇಷ ಮತ್ತು ಛತ್ರಪತಿತ್ವ: ಸಾಹಿತ್ಯ

ಚರಿತ್ರೆಯಲ್ಲಿ ಛಂದೋರೂಪಗಳ ವಾಗ್ವಾದ, ಕನ್ನಡ ಸಂಶೋಧನೆಯ ದುಃಸ್ಥಿತಿ, ಕನ್ನಡ ಸಂವರ್ಧನೆ- ಮುಂತಾದವು ಕನ್ನಡ ವಿಮರ್ಶೆಯ ಪ್ರಬುದ್ಧತೆಯ ಸಂಕೇತಗಳಾಗಿವೆ. ಇವು ಪತ್ರಿಕೆಗಳಿಗೆ ಬರೆದ ಅಂಕಣ ಬರಹಗಳಾಗಿದ್ದರೂ ಆ ಕ್ಷಣದ ಅನಿಸಿಕೆಯಾಗಿರದೆ ನಿತ್ಯನೂತನ ಚಿಂತನೆಗಳಾಗಿವೆ. ಸಾಹಿತ್ಯ ಕಥನಗಳನ್ನೆಲ್ಲ ಸಂಸ್ಕೃತಿ ಕಥನವನ್ನಾಗಿಸಿದ ಡಿ.ಆರ್.ನಾಗರಾಜ ಅವರು ಇಲ್ಲಿ ಸಂಸ್ಕೃತಿ ಕಥನಗಳನ್ನೆಲ್ಲ ಸಾಹಿತ್ಯ ಕಥನವನ್ನಾಗಿಸಿದ್ದಾರೆ. ಸಂಸ್ಕೃತಿ ಕಥನ ಕೃತಿಯಲ್ಲಿನ ವಿಷಯ ವ್ಯಾಪ್ತಿಯನ್ನು ಹೀಗೆ ಕ್ರೋಢೀಕರಿಸುವುದಾದರೆ;

1. ಕನ್ನಡ ಸಾಹಿತ್ಯ ವಾಗ್ವಾದಗಳು
2. ಕನ್ನಡ ಭಾಷೆ, ಸಾಹಿತ್ಯ, ಸಂಶೋಧನೆಯ ದುಃಸ್ಥಿತಿ, ಶಿಕ್ಷಣ
3. ಸಮಕಾಲೀನ ರಾಜಕೀಯ ಚಿಂತನೆಯ ಪ್ರತೀಕವಾಗಿ ರಾಜಕಾರಣಿಗಳು ಹಾಗೂ ದಾರ್ಶನಿಕರನ್ನು ಸಂಸ್ಕೃತಿ ಚರ್ಚೆಯನ್ನಾಗಿಸಿರುವುದು.
4. ಧಾರ್ಮಿಕ ಸಂಗತಿಗಳನ್ನು ಸಮಕಾಲೀನ ಸಂದರ್ಭದಲ್ಲಿ ನೋಡುವ ವಿಶಿಷ್ಟ ಕ್ರಮ.
5. ಚುನಾವಣೆ(ಪಂಚಾಯತ್ ರಾಜ್)
6. ಮಣ್ಣಿನ ಪವಿತ್ರೀಕರಣ
7. ವಿವಿಧ ದಿನಪತ್ರಿಕೆಗಳ ಪರಿಚಯ, ವ್ಯಕ್ತಿ ಪರಿಚಯ, ಜಾಗತಿಕ ದುರಂತಗಳು ಮತ್ತು ವಿದ್ಯಮಾನಗಳು.
8. ವಿವಿಧ ಲೇಖಕರ ಕೃತಿ ಪರಿಚಯ ಮತ್ತು ಸಂದರ್ಶನಗಳು

'ಪಿತೃಹತ್ಯೆಯೇ ಪ್ರಗತಿಯ ಹೆದ್ದಾರಿ' ಎಂದು ಮುನ್ನುಗ್ಗುವ ಡಿ.ಆರ್.ನಾಗರಾಜ ಸ್ಥಾವರಲಿಂಗಗಳೆನ್ನಬಹುದಾದ ಏಕರೂಪಾತ್ಮಕ ಗ್ರಹಿಕೆಗಳು, ವಿರಾಟ್ ಸಮ್ಮತ ರಾಜಮಾರ್ಗಗಳು, ವಿಶ್ವಸ್ಥ ಮಾದರಿಯ ಅಧ್ಯಯನ ಇತ್ಯಾದಿಗಳನ್ನು ವೀರಾವೇಶದಿಂದ ಬಗ್ಗು ಬಡಿದಿದ್ದಾರೆ. ಡಿ.ಆರ್.ನಾಗರಾಜರ ವಿಮರ್ಶಾ ಚಿಂತನೆಗೆ ವಿವೇಕಕ್ಕೆ ಹಲವು ಸಮರ್ಥನೆಗಳಿವೆ. ಎ.ಕೆ.ರಾಮಾನುಜನ್ ಅವರು ಸ್ಪೀಕಿಂಗ್ ಆಫ್ ಶಿವ (1973) ಕೃತಿಯಲ್ಲಿ ಸಂಸ್ಕೃತಿಯನ್ನು ನಿರ್ವಚಿಸಲು ಬಳಸಿಕೊಂಡಿರುವ ದ್ವಂದ್ವಾತ್ಮಕ ಪರಿಭಾಷೆಗಳೆಲ್ಲವೂ ಒಂದರೊಳಗೊಂದು ಬೆರೆತು ಸದಾ ಕ್ರಿಯಾಶೀಲವಾಗಿರುವ 'ಕೂಡಲಸಂಗಮ' ತತ್ವವನ್ನು ಪ್ರತಿಪಾದಿಸಿದ್ದಾರೆ. ಇದನ್ನು ಡಿ.ಆರ್.ನಾಗರಾಜ ಅವರು ಪ್ರಸ್ತಾಪಿಸದಿದ್ದರೂ ಇಡೀ ಕನ್ನಡ ಸಾಹಿತ್ಯ ಚರಿತ್ರೆಯೇ ದೇಸಿಯಿಂದ ಮಾರ್ಗಕ್ಕೆ ಮಾರ್ಗದಿಂದ ದೇಸಿಗೆ ಮರಳಿ ದೇಸಿಯಿಂದ ಮಾರ್ಗಕ್ಕೆ ಬಂದ ಚಕ್ರೀಯ ಪ್ರಕ್ರಿಯೆಯನ್ನು ಡಿ.ಆರ್.ನಾಗರಾಜ ಅವರು 'ಛದ್ಮವೇಷ ಮತ್ತು ಛತ್ರಪತಿತ್ವ' ಎಂಬ ರೂಪಕ ಮಾರ್ಗದಲ್ಲಿ ವಿವರಿಸುತ್ತಾ ಅದನ್ನು ಕನ್ನಡ ಸಾಹಿತ್ಯದ ಪ್ರಮುಖ ವಾಗ್ವಾದವನ್ನಾಗಿಸಿದ್ದಾರೆ. "ಒಂದು ಕಾಲದಲ್ಲಿ ಚಂಪೂ ವಿರಾಟ್ ರಾಜ ಪ್ರಕಾರವಾಗಿತ್ತು. ಇನ್ನಿತರ ಛಂದೋರೂಪಗಳು ಆ ರಾಜ ಛಂದೋರೂಪದಡಿಯಲ್ಲಿ ಇದ್ದಕೊಂಡು ವಿನಯದಿಂದ ತಗ್ಗಿ ಬಗ್ಗಿ ನಡೆಯಬೇಕಾಗಿತ್ತು. ಹೀಗೆ ಕನ್ನಡದ ಅನೇಕ ಛಂದೋರೂಪಗಳು ಒಂದು ರೀತಿಯ ಮರೆ ಮುಸುಕಿನಲ್ಲಿ ಛದ್ಮವೇಷದಲ್ಲಿದ್ದುಕೊಂಡು ಬದುಕುಳಿದು ಬಂದದ್ದನ್ನು ಕಾಣಬಹುದು. ದೇಶಾಂತರದಲ್ಲಿ ವನವಾಸದಲ್ಲಿ ಇದ್ದು ಈ ಛಂದೋರೂಪಗಳು ಮುಂದೊಂದು ಕಾಲಘಟ್ಟದಲ್ಲಿ ಛದ್ಮವೇಷವನ್ನು ಕಳಚಿಹಾಕಿ ಛತ್ರಪತಿತ್ವಗಳನ್ನು ಗಳಿಸಲು ಪ್ರಾರಂಭಿಸಿದವು'. ಹೀಗೆ ಛಂದೋರೂಪಗಳು ತಮ್ಮ ಛದ್ಮವೇಷ ಮತ್ತು ಛತ್ರಪತಿತ್ವಗಳ ನಡುವ ಆಡುವ ಆಟದ ಕ್ರಮವೇ ಕನ್ನಡ ಸಾಹಿತ್ಯ ಚರಿತ್ರೆಯ ರೂಪವಾಗಬಲ್ಲುದು. ಸಾಹಿತ್ಯವನ್ನು ಚರಿತ್ರೆಯೆಂತೆಯೇ ಗ್ರಹಿಸುವ ಮೋಹಕ ದುರಭ್ಯಾಸವನ್ನು ಬಿಟ್ಟು ಸಾಹಿತ್ಯದ್ದೇ ಚರಿತ್ರೆಯನ್ನು ಗ್ರಹಿಸುವುದು ಸಾಧ್ಯವೇ ಎಂದು ಹುಡುಕುವ ಛದ್ಮವೇಷ ಮತ್ತು ಛತ್ರಪತಿತ್ವ ಛಂದೋಪ್ರಕಾರಗಳನ್ನು ವಿಜೃಂಭಿಸಿ ಮರೆವೆಗೆ ಸಂದು, ಮತ್ತೆ ತಲೆ ಎತ್ತಿದ ಘಟನೆಗಳನ್ನು ಕನ್ನಡ ಸಂಸ್ಕೃತಿಯ ಸಾಹಿತ್ಯದ ಚರಿತ್ರೆ ಎಂದು ನೋಡುವ ಬಗೆಯನ್ನು ಪ್ರಸ್ತಾಪಿಸುತ್ತದೆ.

ಕನ್ನಡ ಭಾಷೆ, ಸಾಹಿತ್ಯ ಸಂಶೋಧನೆಯ ದುಃಸ್ಥಿತಿ, ಶಿಕ್ಷಣ ಮುಂತಾಗಿ ಮುಹತ್ವದ ಸಂಗತಿಗಳನ್ನು ಪರಾಮರ್ಶಿಸಿದ್ದಾರೆ. ವಿಶ್ವವಿದ್ಯಾನಿಲಗಳ ಉನ್ನತ ಪದವಿಯ ಯಾವ ಹಂಗೂ ಇಲ್ಲದೆ ಸಂಶೋಧನೆ ನಡೆಸುತ್ತಿದ್ದ ಕಾಲ ಮತ್ತು ಮಹನೀಯರನ್ನು ಸ್ಮರಿಸುತ್ತಾರೆ. ಆರ. ನರಸಿಂಹಾಚಾರ್, ಮುಳಿಯ ತಿಮ್ಮಪ್ಪಯ್ಯ, ಶಂಬಾಜೋಷಿ, ಗೋವಿಂದಪೈ, ರಂ.ಶ್ರೀ,ಮುಗಳಿ,

ತಿ.ತಾ,ಶರ್ಮ, ಘ.ಗು.ಹಳಕಟ್ಟಿ, ಎಂ.ಚಿದಾನಂದಮೂರ್ತಿ, ಎಲ್.ಬಸವರಾಜ, ಟಿ.ವಿ.ವೆಂಕಟಾಚಲಶಾಸ್ತ್ರೀ ಮೊದಲಾದವರನ್ನು ಸ್ಮರಿಸುತ್ತಾ ಇಂದಿನ ದುಃಸ್ಥಿತಿಯನ್ನು ಎಳೆಎಳೆಯಾಗಿ ಬಿಡಿಸುತ್ತಾರೆ. ಮಾರ್ಗದರ್ಶಕರು -ಅಭ್ಯರ್ಥಿ ನಿಯಮಾವಳಿಗಳ ಸಮಸ್ಯೆ ಒಂದೆಡೆಯಾದರೆ, ಮತ್ತೊಂದೆಡೆ ಪಿಎಚ್.ಡಿ ವಿದ್ಯಾರ್ಥಿಗಳ ಬರವಣಿಗೆಯ ಗುಣಮಟ್ಟವನ್ನು ಕಂಡು ವಿಷಾದಪಡುತ್ತಾರೆ. ಶಿಕ್ಷಣದ ವ್ಯಾಪಾರೀಕರಣ, ಪಠ್ಯಪುಸ್ತಕಗಳ ಗುಣಮಟ್ಟು, ಇಂಗ್ಲಿಷ್ ನ ಭೀತಿ, ಕನ್ನಡ-ಇಂಗ್ಲಿಷ್ ಕಾಗಳಗಳನ್ನು ಚರ್ಚಿಸುತ್ತಾರೆ. ಕನ್ನಡ ಸಂವರ್ಧನೆಗೊಳ್ಳುವ ಬಗೆಯ ಸಮಕಾಲೀನ ಕರ್ನಾಟಕ ಸನ್ನಿವೇಶದಲ್ಲಿ ಗುರುತಿಸುವ ಪ್ರಯತ್ನ ಮಾಡುತ್ತಾರೆ. ಕರ್ನಾಟಕದ ಬಲಸಂವರ್ಧನೆ ಎಂದರೆ ಕನ್ನಡಿಗರ ರಾಜಕೀಯಾಧಿಕಾರ ಸಂವರ್ಧನೆ, ಆರ್ಥಿಕತೆಯ ಸಂವರ್ಧನೆ ಎಂದು ವಿವರಿಸಿಕೊಳ್ಳುತ್ತಾರೆ.

ಕನ್ನಡ ಸಂವರ್ಧನೆಯ ಸಾಧ್ಯತೆಗಳನ್ನು ಚರ್ಚಿಸುತ್ತಾ ನಮ್ಮನ್ನು ಅನೇಕ ಆಯಾಮಗಳೊಡನೆ ಮುಖಾಮುಖಿಯಾಗಿಸುತ್ತಾರೆ. ಕನ್ನಡದ ಜೊತೆಗೆ ಕನ್ನಡಿಗರ ಸಂವರ್ಧನೆಯ ಸಾಧ್ಯತೆಯ ಹುಡುಕಾಟವಿದೆ. ಇಂಗ್ಲಿಷ್ ಭಾಷೆ ದೇಶೀ ಭಾಷೆಗಳ ಮೇಲೆ ಸವಾರಿ ಮಾಡುತ್ತಿದೆ ಎಂಬುದಕ್ಕಿಂತ ಭಿನ್ನ ಧಾಟಿಯಲ್ಲಿ ಕನ್ನಡ- ಕನ್ನಡಿಗರ ಸಂವರ್ಧನೆಯನ್ನು ಮಂಡಿಸುತ್ತಾರೆ. ನೀಷೆಯ ಪ್ರಕಾರ ರಾಜಕೀಯ, ಅಧಿಕಾರ, ಆರ್ಥಿಕತೆ, ವಿಶ್ವವ್ಯಾಪಾರ, ಸೈನ್ಯ, ಸಂಪತ್ತು ಇತ್ಯಾದಿ ದಿಕ್ಕಿನಲ್ಲಿ ಏಕಾಗ್ರತೆಯಿಂದ ಶಕ್ತಿ ಹಿಡಿಸಿದಷ್ಟು ಉಳಿದ ಕಡೆಗೆ ಅಷ್ಟರ ಮಟ್ಟಿಗೆ ಶಕ್ತಿಯ ಕೊರತೆ ಉಂಟಾಗುತ್ತದೆ. ಸಾಂಸ್ಕೃತಿಕವಾಗಿ ಸಮಾಜ ಅಷ್ಟರಮಟ್ಟಿಗೆ ಬಡವಾಗುತ್ತದೆ. ಪ್ರಭುತ್ವ ಮತ್ತ ಸಂಸ್ಕೃತಿಗಳೆರಡೂ ಒಟ್ಟಿಗೆ ಹೋಗಲಾರವು ಎನ್ನುವುದು ಅವನ ವಾದ. ಸರ್ಕಾರ ಮತ್ತು ಸಂಸ್ಕೃತಿಗಳ ಸಂಬಂಧವೂ ಹಾಗೆ ಒಂದು ಇನ್ನೊಂದನ್ನು ಮುಕ್ಕಿ ಜೀವಿಸುತ್ತವೆ. ಭಾಷಿಕ ಕುಲವೊಂದು ರಾಜಕೀಯವಾಗಿ ಏಕಾಗ್ರತೆಯಿಂದ ಶಕ್ತಿಶಾಲಿಯಾಗಲು ಪ್ರಯತ್ನಿಸಿದ ಹಾಗೆಲ್ಲ ಅದರ ಸಂಸ್ಕೃತಿಗೆ ಪೆಟ್ಟು ಬೀಳುತ್ತದೆ. ಅಂಗೀಕೃತ ಅಭಿವೃದ್ಧಿ ಪಥವನ್ನು ಸಮಗ್ರವಾಗಿ ತಿರಸ್ಕರಿಸುವುದರಿಂದಲೇ ಹೊಸ ಪರ್ಯಾಯದ ಹುಡುಕಾಟ ಸಾಧ್ಯ ಎಂಬ ನಂಬಿಕೆ ಇಲ್ಲಿದೆ. ಕನ್ನಡ ಚಳವಳಿಗಳ ಸ್ವರೂಪವನ್ನು ಅಧ್ಯಯನ ಮಾಡುವವರು ಓದಲೇಬೇಕಾದ ಲೇಖನ ಸಮಕಾಲೀನ ಕರ್ನಾಟಕ. ಕಾಡಿನ ನಾಶ, ದೈತ್ಯಾಕಾರದ ಯೋಜನೆಗಳು, ಬರಗಾಲ ಪರಿಹಾರ ಕಾಮಗಾರಿಯ ತತ್ವಹೀನತೆ, ಪ್ರತಿಷ್ಠಿತ ಜಾತಿಗಳ ಶಕ್ತಿ ಸ್ವರೂಪ, ಕೋಮು ಗ್ರಹಿಕೆ, ಪ್ರಾಥಮಿಕ ಶಿಕ್ಷಣ- ಇವೆಲ್ಲಕ್ಕೂ ಕನ್ನಡಕ್ಕೂ ಇರುವ ಸಂಬಂಧವನ್ನು ಲೇಖನ ಗಮನಕ್ಕೆ ತರುತ್ತದೆ.

'ಸಮಕಾಲೀನ ಕರ್ನಾಟಕ' ಲೇಖನವು ಎಂಟು ಕಂತುಗಳಲ್ಲಿ ಕರ್ನಾಟಕವನ್ನು ಅದರ ಸಮಕಾಲೀನತೆಯೊಂದಿಗೆ ಪರಿಚಯಿಸುವ ಬರೆಹ. ಕನ್ನಡ ಚಳವಳಿ ಮತ್ತು ಮೇಲುವರ್ಗ, ನಾಡಿನ ಕಾಡು ನಾಶವಾದ ಬಗೆ, ನಮ್ಮ ದೈತ್ಯಾಕಾರಿ ಯೋಜನೆಗಳು, ಬರಗಾಲದ ಮಾರಿ ಮತ್ತು ಪರಿಹಾರ, ಪ್ರತಿಷ್ಠಿತ ಜಾತಿಗಳ ಶಕ್ತಿರೂಪ, ಪ್ರಾಥಮಿಕ ಶಿಕ್ಷಣದ ದುರ್ಗತಿ, ಕೋಮು ಗ್ರಹಿಕೆ ಘರ್ಷಣೆ, ಸಮಗ್ರ ಚಿಂತನೆ-ಕ್ರಿಯೆಯ ಕಡೆಗೆ- ಲೇಖನಗಳ ಮೂಲಕ ಸಮಕಾಲೀನ ಕರ್ನಾಟಕವನ್ನು ಜೊತೆಗೆ ಸಾಗಬೇಕಾದ ಹಾದಿಯನ್ನು ಚರ್ಚಿಸುತ್ತಾರೆ. ಭಾಷಾ ಚಳವಳಿ ಕುರಿತ ಅವರ ಅಭಿಪ್ರಾಯ ಹೀಗಿದೆ: "ಭಾಷಿಕ ಚಳವಳಿಯೇ ಮೊದಲು ಮತ್ತು ಕೊನೆ ಎಂಬಂಥ ಪರಿಸ್ಥಿತಿಗೆ ಬರಬಾರದು. ಕನ್ನಡ ಚಳವಳಿ ನಮ್ಮಲ್ಲಿ ಆ ರೀತಿ ಆಗುತ್ತಿದೆಯೇನೊ ಎಂಬ ಭಯ ನನ್ನಂಥ ಅನೇಕರನ್ನು ಕಾಡುತ್ತಿದೆ. ಮಧ್ಯಮ ವರ್ಗದ ಆಶೋತ್ತರಗಳನ್ನು ಮಾತ್ರ ಬಿಂಬಿಸುವ ಚಳವಳಿ ಅದಾಗಿಬಿಟ್ಟಿದೆ. ಕರ್ನಾಟಕದ ಬಹುಸಂಖ್ಯಾತ ಬಡವರ ವಾಸ್ತವವನ್ನು ಒಳಗೊಳ್ಳದ ನಾಡಿನ ಕಲ್ಪನೆ, ನುಡಿಯ ಕಲ್ಪನೆ ಸುಳ್ಳು ಎಂಬುದ ಮನದಟ್ಟಾಗಿದ್ದರೆ ಹುಟ್ಟುವ ಅಪಾಯಗಳು ಅಸಂಖ್ಯ"[1]. ಎನ್ನುವ ಡಿ.ಆರ್.ನಾಗರಾಜರು ಇದರ ಅಪಾಯಗಳನ್ನು ಹೀಗೆ ಗುರುತಿಸುತ್ತಾರೆ:

1. ಚಳವಳಿಯ ಮೂಲ ಸೂತ್ರವಾದ ಸಂಸ್ಕೃತಿಯೆ ಜಿಡ್ಡಾಗಿ, ಒಣಗಿ ಹೋಗುತ್ತದೆ.
2. ಭಾಷಿಕ ಚಳವಳಿ ನಾಡಿನ ಇನ್ನಿತರ ಚಳವಳಿಗಳಿಗೆ ಪ್ರತಿಸ್ಪರ್ಧಿಯಾಗುವ ಅಪಾಯವಿದೆ.

ಜೊತೆಗೆ ಡಿ.ಆರ್.ನಾಗರಾಜರು ಕನ್ನಡ ಸಂಸ್ಕೃತಿಯ ವೈಶಿಷ್ಟ್ಯವನ್ನು ದಾಖಲಿಸಿದ್ದಾರೆ. 'ಕನ್ನಡ ಸಂಸ್ಕೃತಿಯಲ್ಲಿ

ಸಾಹಿತ್ಯ ಯಾವಾಗಲೂ ಸಾಮಾಜಿಕ ಜವಾಬ್ದಾರಿಯನ್ನು ಅಂತರ್ಗತವಾಗಿಸಿಕೊಂಡಿದೆ. ಅದರ ಸಾಮಾಜಿಕ ಹೊಣೆಗಾರಿಕೆಯ ಹುಡುಕಾಟಗಳು ಅವರನ್ನು ಈ ಭಿನ್ನಕ್ಷೇತ್ರಗಳತ್ತ ಒಯ್ದಿವೆ. ನನ್ನ ಪ್ರಕಾರ ಇದು ಆಧುನಿಕ ಕನ್ನಡ ಸಾಹಿತ್ಯ ಸಂಸ್ಕೃತಿಯ ಮುಖ್ಯ ಗುಣ”[2] ಎಂದು ಅಭಿಪ್ರಾಯಪಡುತ್ತಾರೆ.

ಕಾಡಿನ ನಾಡು ನಾಶವಾದ ಬಗೆಯನ್ನು ವಿವರಿಸುವ ರೀತಿ ಅನನ್ಯವಾದುದು. ಕುವೆಂಪು ಕಾದಂಬರಿಗಳಲ್ಲಿ ಮಾತ್ರ ಮಲೆನಾಡಿನ ದಟ್ಟ ಕಾನನ ಉಳಿದಿದೆ ಎನ್ನುವ ಲೇಖಕರು ಪರಿಸರ ವಿನಾಶದ ತಕ್ಷಣದ ಬಲಿಪಶುಗಳು ಬಡವರು ಎನ್ನುತ್ತಾರೆ. ದೊಡ್ಡ ಪ್ರಮಾಣದ ಅಣೆಕಟ್ಟುಗಳು, ಅರಣ್ಯಾಧಾರಿತ ಕೈಗಾರಿಕೆಗಳು ಮತ್ತು ಆಧುನಿಕ ಕೃಷಿ ಪದ್ಧತಿಗಳು ಕಾಡಿನ ನಾಶಕ್ಕೆ ಕಾರಣ ಎಂದು ಗುರುತಿಸುತ್ತಾರೆ. ಮತ್ತು ದೈತ್ಯಾಕಾರಿ ಯೋಜನೆಗಳ ಅಪಾಯಗಳನ್ನು ಕುರಿತು ಬರೆಯುತ್ತಾರೆ. ಬರಪರಿಹಾರ ಕಾರ್ಯಕ್ರಮಗಳು, ತತ್ವಹೀನ ರಾಜಕಾರಣ ಕುರಿತ ಒಳನೋಟಗಳು ಇಲ್ಲಿವೆ. ಪ್ರತಿಷ್ಠಿತ ಜಾತಿಗಳ ಶಕ್ತಿಸ್ವರೂಪ ಲೇಖನವೂ ಸಹ ಸಮಕಾಲೀನ ಗುಣದಿಂದ ಕೂಡಿದೆ. “ಬ್ರಾಹ್ಮಣ-ಒಕ್ಕಲಿಗ-ಲಿಂಗಾಯತ ಶಕ್ತಿ ಕೇಂದ್ರದಾಚೆಗಿನ ಸಾಧ್ಯತೆಗಳ ಬಗ್ಗೆ ನಾವೀಗ ಯೋಚನೆ ಮಾಡಲೇಬೇಕಾಗಿದೆ” [3]ಎಂಬ ಗ್ರಹಿಕೆ ಸರಿ ಎನಿಸುತ್ತದೆ.

ಧರ್ಮ-ಕಾರಣ-ರಾಜಕಾರಣ ಕೇಂದ್ರವಾಗಿರುವ ಬರಹಗಳು ಸಾಮಾಜಿಕ ಚಳವಳಿಗಳನ್ನು ಪರಿಶೀಲಿಸುತ್ತಾ ಒಣ ತರ್ಕವೇ ಮುಖ್ಯವಾಗಿರುವ ರ್ಯಾಶನಲಿಸಂ, ಹಿಂಸೆಯನ್ನೇ ಪ್ರಚೋದಿಸುವ ಧಾರ್ಮಿಕತೆ, ಬದುಕನ್ನೆಲ್ಲ ಆರ್ಥಿಕ ಸಂಬಂಧಗಳನ್ನಾಗಿಯಷ್ಟೇ ನೋಡುವ ಮಾರ್ಕ್ಸ್ ವಾದ ತಪ್ಪು ಆರ್ಥಿಕ ಮಾದರಿಗಳನ್ನು ಅನುಸರಿಸುವ ರಾಜಕಾರಣ, ಗಹನ ಚಿಂತನೆ ವಿದ್ವತ್ತುಗಳನ್ನು ನಿರಾಕರಿಸುವ ಬಂಡಾಯಗಳನ್ನೆಲ್ಲಾ ಬಿಟ್ಟು ಅಸ್ತಿತ್ವವಾದೀಯ ಕಾರಣಗಳಿಗಾಗಿ ಏಳುವ ದಂಗೆ ಅನಿವಾರ್ಯ ಎಂಬ ನಿಲುವು ತಾಳುತ್ತಾರೆ. ಭಾರತೀಯ ನಾಸ್ತಿಕ ದರ್ಶನಗಳು, ಬೋಧಿವೃಕ್ಷ ನಡೆಸಿದ ‘ಧರ್ಮಸಂವಾದ’, ಅಂಬೇಡ್ಕರ್ ಮತ್ತು ಬೌದ್ಧಧರ್ಮ. ಮಾರ್ಕ್ಸ್ ಮತ್ತು ಧರ್ಮ, ಬುದ್ಧನೋ ಕಾರ್ಲ್ ಮಾರ್ಕ್ಸೋ, ಚಲಿಸುವ ಧರ್ಮ ಮರೆತು ನಿಂತ ಕಟ್ಟಡಕ್ಕಾಗಿ ಸಾಯುವವರು- ಮುಂತಾದ ಧಾರ್ಮಿಕ ಸಂಗತಿಗಳನ್ನು ಸಮಕಾಲೀನ ಸಂದರ್ಭದಲ್ಲಿಟ್ಟು ನೋಡುವ ವಿಶಿಷ್ಟ ಕ್ರಮ ಈ ಕೃತಿಯ ಮಹತ್ವವನ್ನು ಹೆಚ್ಚಿಸಿದೆ.

19ನೇ ಶತಮಾನದಲ್ಲಿ ರೂಪುತಳೆದ ‘ರಾಷ್ಟ್ರ’ ಎನ್ನುವ ಕಲ್ಪಿತ ಕುಲಗಳನ್ನು ಅದಕ್ಕೂ ಪೂರ್ವದಲ್ಲಿದ್ದ ಆಧುನಿಕ ಪೂರ್ವದ ರಾಷ್ಟ್ರದ ಕಲ್ಪನೆಯನ್ನು ರಾಷ್ಟ್ರ (ಪೂರ್ವದ್ದು) ರಾಷ್ಟ್ರ ಪ್ರಭುತ್ವ (ಆಧುನಿಕ) ಗಳ ನಡುವಿನ ವ್ಯತ್ಯಾಸಗಳನ್ನು ಹಾಗು ಮೊದಮೊದಲು ಮೋಹಕವಾಗಿ ಕಾಣುವ ‘ರಾಷ್ಟ್ರ’ವು ರಾಷ್ಟ್ರಪ್ರಭುತ್ವವಾಗಿ ಬೆಳೆದಾಕ್ಷಣ ಭಯಾನಕವಾಗಿ, ಅಪಾಯಕಾರಿಯಾಗಿ ಕಾಣುವ ಮತ್ತು ಆಧುನಿಕ ಪೂರ್ವ ಕಾಲದ ರಾಷ್ಟ್ರಗಳು ಆಧುನಿಕ ಕಾಲದ ರಾಷ್ಟ್ರ ಪ್ರಭುತ್ವಗಳಾಗಿ ಬದಲಾಗಿರುವ ಪ್ರಕ್ರಿಯೆಯ ಒಳಗಡೆ ಅವುಗಳ ವರ್ತಮಾನದ ಅನೇಕ ಬಿಕ್ಕಟ್ಟುಗಳ ಮೂಲಕಾರಣಗಳು ಹುದುಗಿವೆ ಎಂಬುದನ್ನು ‘ಮಣ್ಣಿನ ಪವಿತ್ರೀಕರಣ’ ಲೇಖನ ಸಾದ್ಯಂತ ವಿವರಿಸುತ್ತದೆ.

ಸಂಸ್ಕೃತಿ ಕಥನ ಕೃತಿಯಲ್ಲಿ ಅನೇಕ ದಿನ ಪತ್ರಿಕೆಗಳ ಪರಿಚಯವಿದೆ. ಸಿದ್ದಲಿಂಗಯ್ಯ, ಅನಂತಮೂರ್ತಿ, ಚಂಪಾ, ರಾಮಚಂದ್ರಶರ್ಮ ಮೊದಲಾದವರ ಕೃತಿ ಪರಿಚಯವಿದೆ. ಅನೇಕ ವ್ಯಕ್ತಿಗಳ ಪರಿಚಯವಿದೆ. ಪ್ಯಾಲೆಸ್ಟೀನಿಯನ್ನರ ಆತ್ಮಕಥೆ, ಲೆಬನಾನ್ ದುರಂತ, ರಷ್ಯಾದಲ್ಲಿ ಐತಿಹಾಸಿಕ ಜನತಂತ್ರ ದಿಗ್ವಿಜಯ ಮುಂತಾದ ಲೇಖನಗಳಲ್ಲಿ ಜಾಗತಿಕ ದುರಂತ ಹಾಗೂ ವಿದ್ಯಮಾನಗಳನ್ನು ಚರ್ಚಿಸಿರುವುದನ್ನು ಕಾಣಬಹುದು.

ಕನ್ನಡ ಸಂಸ್ಕೃತಿಯನ್ನು ಶೈಕ್ಷಣಿಕವಾಗಿ ಬೌದ್ಧಿಕವಾಗಿ ಆಕರ್ಷಕವಾಗಿ ಹೊರ ಜಗತ್ತಿಗೆ ಮಂಡಿಸುವ ಪ್ರಶ್ನೆಯನ್ನು ಪರಿಭಾವಿಸುವ ಡಿ.ಆರ್.ನಾಗರಾಜ್ ಇದರೊಳಗೆ ಹುದುಗಿರುವ ರಾಜಕೀಯ ಆಯಾಮವನ್ನು ದೃಷ್ಟಿಯಲ್ಲಿರಿಸಿಕೊಂಡು ಇದರಲ್ಲಿರುವ ಸಮಸ್ಯೆಗಳನ್ನು ಪರಿಶೀಲಿಸುತ್ತಾ ನವ ವಸಾಹತೀಕರಣದ ಎಲ್ಲ ಸಮಸ್ಯೆಗಳು ಈ ಶೈಕ್ಷಣಿಕ ಯೋಜನೆಗಳಲ್ಲಿ ತಲೆಹಾಕುತ್ತವೆ. ಈ ವೈರುಧ್ಯಗಳನ್ನು ದಾಟಲು ಇರುವ ಒಂದೇ ಮಾರ್ಗ ಎಂದರೆ ಕನ್ನಡ ಬೌದ್ಧಿಕ ಪರಂಪರೆಗಳು ತಾವು ತೀವ್ರವಾಗಿ ಅಂತರ್ಮುಖಿಯಾಗಿ ಬೆಳೆಯುತ್ತಾ ಹೋಗುವುದು ಇದು ನಿರ್ವಸಾಹತೀಕರಣದ ನಡೆಯೂ ಹೌದು.

**ಕೊನೆ ಟಿಪ್ಪಣಿಗಳು**

1. ಸಂಸ್ಕೃತಿ ಕಥನ – ಪುಟ.44
2. ಅದೇ ಪುಟ. 45
3. ಅದೇ ಪುಟ.56

**ಆಕರ ಗ್ರಂಥ**


1. ಸಂಸ್ಕೃತಿ ಕಥನ
2. ಡಿ.ಆರ್.ನಾಗರಾಜ್
3. ಸಂಪಾದಕರು: ಅಗ್ರಹಾರ ಕೃಷ್ಣಮೂರ್ತಿ
4. ಕನ್ನಡ ಪುಸ್ತಕ ಪ್ರಾಧಿಕಾರ
5. ಬೆಂಗಳೂರು, 2002